


# ರಾಜ್ ಸವಿನೆನಪುಗಳ ಅಕ್ಷಯಪಾತ್ರೆ

ಏಪ್ರಿಲ್ ತಿಂಗಳು ರಾಜ್‌ಕುಮಾರ್ ಅವರ ನೆನಪಿನ ತಿಂಗಳು (ಏ. 24, 1929 – ಏ. 12, 2006). ನಿಧನರಾಗಿ ಒಂದೂವರೆ ದಶಕ ಕಳೆದರೂ ರಾಜ್ ಅವರ ನೆನಪು ಜನಮಾನಸದಲ್ಲಿ ಅಚ್ಚಳಿಯದಂತಿದೆ. 'ರಾಜ್‌ಮಾಸ'ದ ಸಂದರ್ಭದಲ್ಲಿ ವರನಟನ ವ್ಯಕ್ತಿತ್ವದ ಕುರಿತಂತೆ ವೈದ್ಯರೊಬ್ಬರು ಕೆಲವು ಅಪರೂಪದ ನೆನಪುಗಳು.

■ ಡಾ. ವೀಣಾಭಾರತಿ

ವರನಟ ರಾಜ್‌ಕುಮಾರ್ ಅವರ ಜೊತೆ ನನ್ನ ತಂದೆಯವರ ಸ್ನೇಹ ಪ್ರಾರಂಭವಾಗಿದ್ದು ಆರು ದಶಕಗಳಿಗೂ ಹಿಂದೆ! ನನ್ನ ತಂದೆಯವರಾದ ಅಶ್ವತ್ಥನಾರಾಯಣರವರ ಊರು ಚಾಮರಾಜನಗರ, 'ಅಣ್ಣಾವ್ರ' ಗಾಜನೂರಿನಿಂದ ಸುಮಾರು 15 ಮೈಲಿ ದೂರ.

ಚಾಮರಾಜನಗರದಲ್ಲಿ ಮೊತ್ತ ಮೊದಲ ಚಿತ್ರಮಂದಿರವನ್ನು ಪ್ರಾರಂಭ ಮಾಡಿದ ಹೆಗ್ಗಳಿಕೆ ನನ್ನ ತಂದೆಯವರದು. ಅದಕ್ಕೂ ಮೊದಲು, ತಮ್ಮ ತಂದೆ ಸಿಂಗಾನಲ್ಲೂರು ಪುಟ್ಟಸ್ವಾಮಿಯವರೊಡನೆ (ಇನ್ನೂ ಚಿತ್ರ ನಟರಾಗಿರದಿದ್ದ ಮುತ್ತುರಾಜ್‌ರವರು) ಚಾಮರಾಜನಗರದಲ್ಲಿ ಸ್ಟೇಜ್–ಡ್ರಾಮಾಗಳಲ್ಲಿ ಭಾಗವಹಿಸುತ್ತಿದ್ದ ರಾಜ್ ಮತ್ತು ಅವರ ತಂಡದವರಿಗೆ ಪ್ರತಿ ಬಾರಿಯೂ ನನ್ನ ತಂದೆಯವರು ಪಚ್ಚಪ್ಪನವರ ಹೋಟೆಲ್‌ನಲ್ಲಿ ಸೆಟ್ ದೋಸೆ ಕೊಡಿಸಿ ಉಪಚರಿಸಿ ಬೀಳ್ಕೊಡುತ್ತಿದ್ದರು!

1990ರ ಏಪ್ರಿಲ್ ತಿಂಗಳು. ರಾಜ್ ಅವರ 61ನೇ ವರ್ಷದ ಹುಟ್ಟಿದ ಹಬ್ಬ! ನಾನು ಆಗ ಎಂಟು ತಿಂಗಳ ಗರ್ಭಿಣಿ. ಅಕ್ಕ ಪಾರ್ವತಮ್ಮನವರು, ರಾಜ್ ಅವರ ಹುಟ್ಟಿದ ಹಬ್ಬಕ್ಕೆ ನನ್ನನ್ನು ಹಾಗೂ ನನ್ನ ಪತಿ ಡಾ. ಕಿಶೋರ್ ಅವರನ್ನು 'ಬರಲೇಬೇಕೆಂದು' ಆಮಂತ್ರಿಸಿದ್ದರು! ಸಮಾರಂಭದಲ್ಲಿ ಭಾಗವಹಿಸಿ, ಹೊರಟಾಗ ನನಗೆ ಹಸಿರು ಬಳೆಗಳನ್ನು, ಹಣ್ಣುಗಳನ್ನು ಉಡಿ ತುಂಬಿ ಹರಸಿ ಕಳುಹಿಸಿದ್ದರು ರಾಜ್ ದಂಪತಿ.

1993ರ ಮೇ ತಿಂಗಳು. ಪಾರ್ವತಮ್ಮನವರು ಫೋನ್ ಮಾಡಿದರು. 'ಈ ದಿನ ಹಾಸ್‌ಮ್ಯಾಟ್ ಆಸ್ಪತ್ರೆಯಲ್ಲಿ ಇವರನ್ನು ಡಾ. ಥಾಮಸ್ ಚಾಂಡಿಯವರಿಗೆ ತೋರಿಸಲು ಅಪಾಯಿಂಟ್‌ಮೆಂಟ್ ತೆಗೆದುಕೊಂಡಿದ್ದೇವೆ.